**<u>ದಿನಾಂಕಃ 15.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ ಕೆ.ಟಿ.ಟಿ. ವಕೀಲರಿಂದಃ</u>**

1) ನನ್ನ ವೃತ್ತಿ ಜೀವನದಲ್ಲಿ ನಾನು ಇದೇ ಮೊದಲನೇ ಬಾರಿಗೆ ಪ್ರಕರಣದಲ್ಲಿ ನ್ಯಾಯಾಲಯದ ನಿಯೋಗಿಯಾಗಿ ನೇಮಕಗೊಂಡಿರುತ್ತೇನೆ. ಈ ನ್ಯಾಯಾಲಯದಿಂದ ನೀಡಿದ ವಾರೆಂಟ್ ನನಗೆ ಬಂದಿತ್ತು. ಎಂ.ಬಿ.ಹಳ್ಳಿಯ ಸರ್ವೆ ನಂ.467 ರ ಜಮೀನನ್ನು ಅಳತೆ ಮಾಡುವಂತೆ ನನಗೆ ವಾರೆಂಟ್ ಬಂದಿತ್ತು. ಗೌಡಗೆರೆ ಗ್ರಾಮದ ಸರ್ವೆ ನಂ.8 ಮತ್ತು 82 ಅನ್ನು ಅಳತೆ ಮಾಡುವಂತೆ ವಾರೆಂಟ್ ನಲ್ಲಿ ನಮೂದು ಮಾಡಿರುವುದಿಲ್ಲ. ಸಾರ್ವಜನಿರಿಕರಿಂದ ನೋಟೀಸನ್ನು ನೀಡುವಂತೆ ನನಗೆ ನ್ಯಾಯಾಲಯದಿಂದ ಯಾವುದೇ ಮಾಹಿತಿ ಬಂದಿರಲಿಲ್ಲ ಆದರೆ ಆ ಬಗ್ಗೆ ಮೆಮೊ ಆಫ್ ಇನ್‌ಸ್ಟ್ರಕ್ಷನ್ ನಲ್ಲಿ ಇರುತ್ತದೆ.

2) ನಿಪಿ.11 ರ ನಕಾಶೆಯನ್ನು ನಮ್ಮ ಇಲಾಖೆಯವರೇ ತಯಾರಿಸಿರುತ್ತಾರೆ ಎಂದರೆ ಸರಿ. ಸದರಿ ನಕ್ಷೆಯನ್ನು ಜಮೀನಿನ ಮಾಲೀಕರು ಅರ್ಜಿ ನೀಡಿದ ನಂತರ ಆಗ ಇದ್ದ ಸರ್ವೆ ಅಧಿಕಾರಿಗಳು ಅಳತೆ ಕಾರ್ಯ ಜರುಗಿಸಿ ತಯಾರಿಸಿರುತ್ತಾರೆ ಎಂದರೆ ಸರಿ. ನಿಪಿ.11 ರ ನಕಾಶೆ ತಯಾರಿಸಿದ ನಂತರ ಆ ಬಗ್ಗೆ ಗ್ರಾಮ ನಕಾಶೆಯಲ್ಲಿ ಸದರಿ ಅಳತೆಯನ್ನು ನಮೂದಿಸಲಾಗಿದೆ ಎಂದರೆ ಸರಿ. ನಿಪಿ.11 ರ ನಕಾಶೆಯು ಎಂ.ಬಿ.ಹಳ್ಳಿಯ ಸರ್ವೆ ನಂ.467 ರ ಜಮೀನಿಗೆ ಸಂಬಂಧಿಸಿದ್ದು ಎಂದರೆ ಸರಿ. ನಿಪಿ.11 ರ ನಕಾಶೆಯನ್ನು ತಯಾರಿಸುವ ಪೂರ್ವದಲ್ಲಿಯೇ ಎಂ.ಬಿ.ಹಳ್ಳಿಯ ಸರ್ವೆ ನಂ.467 ಗ್ರಾಮ ನಕಾಶೆಯಲ್ಲಿ ದಾಖಲಾಗಿತ್ತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

3) ನಿಪಿ.11 ರ ನಕಾಶೆಯಲ್ಲಿ ಎಂ.ಬಿ.ಹಳ್ಳಿಯ ಸರ್ವೆ ನಂ.467 ರಲ್ಲಿ ರಸ್ತೆ ಇರುವ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದರೆ ಸರಿ. ನಿಪಿ.11 ರ ನಕಾಶೆಯಲ್ಲಿ ಯಾವುದೇ ಹಳ್ಳ ಮತ್ತು ಕರಾಬು ಇರುವುದಿಲ್ಲ ಎಂದರೆ ಸಾಕ್ಷಿಯ ಹದ್ದು ಬಸ್ತು ಮಾಡುವಕಾಲಕ್ಕೆ ಅಂತಹ ಯಾವುದೇ ಹಳ್ಳ ಮತ್ತು ಕರಾಬು ಇದ್ದರೂ ಸಹ ನಕಾಶೆಯಲ್ಲಿ ತೋರಿಸುವುದಿಲ್ಲ ಎಂದು ನುಡಿಯುತ್ತಾರೆ.

4) ಎಂ.ಬಿ.ಹಳ್ಳಿಯ ಗ್ರಾಮ ನಕಾಶೆಯಲ್ಲಿ ಸರ್ವೆ ನಂ.467 ರಲ್ಲಿ ಯಾವುದೇ ರಸ್ತೆ ಮತ್ತು ಹಳ್ಳ ನಮೂದು ಆಗಿರುವುದಿಲ್ಲ. ಅದೇ ರೀತಿ ಗ್ರಾಮ ನಕಾಶೆಯಲ್ಲಿ ಸರ್ವೆ ನಂ.467 ರಲ್ಲಿ ಯಾವುದೇ ಕಟ್ಟೆ ಇರುವ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. ಸದರಿ ಸರ್ವೆ ನಂ.467 ರಲ್ಲಿ ವಾದಿಗೆ ಸೇರಿದ ಮೂರು ಎಕರೆ ಜಮಿನಿನಲ್ಲಿ ಯಾರಾದರೂ ಒತ್ತುವರಿ ಮಾಡಿರುತ್ತಾರೆಯೇ ಎಂಬುದನ್ನು ತೋರಿಸಲು ನನಗೆ ನ್ಯಾಯಾಲಯದಿಂದ ನಿರ್ದೇಶನ ಆಗಿತ್ತು ಎಂದರೆ ಸರಿ.

5) ಎಂ.ಬಿ.ಹಳ್ಳಿಯ ಗ್ರಾಮದಲ್ಲಿ ಇದ್ದ ಮೂಲ ಸರ್ವೆ ನಂ. 383 ರಲ್ಲಿ ಜಮೀನುಗಳನ್ನು ಮಂಜೂರಿ ಮಾಡಿದ ನಂತರ ಅದರ ಆಧಾರದ ಮೇಲೆ ಆ ಜಮೀನುಗಳನ್ನು ಪೋಡಿ ಮಾಡಿದ ನಂತರ ಅಲ್ಲಿ ಸರ್ವೆ ನಂ.467 ಎಂದು ಆಗಿರುತ್ತದೆ ಎಂದರೆ ಸರಿ. ನಾನು ಇಲಾಖೆಯಿಂದ ಸರ್ವೆ ನಂ.467 ಕ್ಕೆ ಸಂಬಂಧಿಸಿದಂತೆ ಲಭ್ಯವಿರುದ ದಾಖಲೆಗಳನ್ನು ಪಡೆದು ಪರಿಶೀಲನೆ ಮಾಡಲಾಗಿ ಸರ್ವೆ ನಂ.467 ರಲ್ಲಿ ಯಾವುದೇ ರೀತಿಯ ಕಟ್ಟೆ ಮತ್ತು ರಸ್ತೆಗಳು ಇರುವುದಿಲ್ಲ ಎಂದು ಕಂಡು ಬಂದಿರುತ್ತದೆ.

6) ಗೌಡಗೆರೆ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 82 ರ ಜಮೀನನ್ನು ಅಳತೆ ಮಾಡಲು ನನಗೆ ನ್ಯಾಯಾಲಯದಿಂದ ಯಾವುದೇ ನಿರ್ದೇಶನ ಬಂದಿರಲಿಲ್ಲ ಎಂದರೆ ಸರಿ. ನ್ಯಾಯಾಲಯದ ಆದೇಶದ ಪ್ರಕಾರ ಸರ್ವೆ ನಂ.467 ರ ಜಮೀನನ್ನು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ.

7) ಸರ್ವೆ ನಂ.383 ಕ್ಕೆ ಸಂಬಂದಿಸಿದಂತ ಗುಂಡಣ್ಣ ಬಿನ್ ತಿಮ್ಮೇಗೌಡರವರ ಹೆಸರಿಗೆ ನೀಡಿರುವ ಗ್ರಾಂಟ್ ಸರ್ಟಿಫಿಕೇಟ್ ನ ದೃಢಿಕೃತ ಪ್ರತಿಯನ್ನು ನನ್ನ ವರದಿಯಲ್ಲಿ ಹಾಜರುಪಡಿಸಿರುತ್ತೇನೆ. **ಸದರಿ ಸರ್ಟಿಫೀಕೇಟನ್ನು ನಿಸಿ.11 ಎಂದು ಗುರುತಿಸಲಾಯಿತು.** ನಿಸಿ.11 ರಲ್ಲಿ ಸರ್ವೆ ನಂ.384 ಅನ್ನು ದಿಃ- 06.01.2024 ರಂದು ರೌಂಡ್ ಆಫ್ ಮಾಡಿ ಅದರ ಕೆಳಭಾಗ ಸರ್ವೆ ನಂಬರ್ 383 ಎಂದು ದಾಖಲಿಸಿ ಸಂಬಂಘಒಟ್ಟ ಇಲಾಖಾ ಅಧಿಕಾರಿ ಸಹಿ ಮಾಡಿರುತ್ತಾರೆ ಎಂದರೆ ಸರಿ.

8) ನ್ಯಾಯಾಲಯದ ಆದೇಶದಲ್ಲಿ ಸರ್ವೆ ನಂ.383 ಕ್ಕೆ ಸೇರಿದ ಫಲಾನುಭವಿಗಳ ಪಟ್ಟಿಯನ್ನು ಪಡೆದು ಅಳತೆ ಮಾಡುವಂತೆ ಇರಲಿಲ್ಲ ಆದರೆ ಆ ಬಗ್ಗೆ ಮೆಮೊ ಆಫ್ ಇನ್ ಸ್ಟ್ರಕ್ಷನ್ ನಲ್ಲಿ ಇರುತ್ತದೆ. ನಿಸಿ.2 ರ ನಕಾಶೆಯಲ್ಲಿ ನಾನು ತೋರಿಸಿರುವ 4 ನೇ ನಂಬರಿನ ರಸ್ತೆ

ಅಧಿಕೃತವಾಗಿ ಇರುವುದಿಲ್ಲ. ಸದರಿ ನಕಾಶೆಯಲ್ಲಿ 8ನೇ ನಂಬರ್ ನ ಪಕ್ಕದಲ್ಲಿ ಪಶ್ಚಿಮ ದಿಕ್ಕಿಗೆ ತೋರಿಸಿರುವ ಹಳ್ಳ ಸಹಾ ದಾಖಲೆಗಳಲ್ಲಿ ಅಧಿಕೃತವಾಗಿ ಇರುವುದಿಲ್ಲ. ಸರ್ವೆ ನಂಬರ್ 467 ಅನ್ನು ಮೂಲವಾಗಿ ದುರಸ್ತಿ ಮಾಡುವ ಸಂಂದರ್ಭದಲ್ಲಿ ಆ ಜಮೀನಿನಲ್ಲಿ ಯಾವುದೇ ಕರಾಬು ಜಾಗ ತೋರಿಸಿರುವುದಿಲ್ಲ ಎಂದರೆ ಸರಿ. ಇಲಾಖಾ ದಾಖಲೆಗಳ ಪ್ರಕಾರ ದಾವಾ ಸ್ವತ್ತು 3 ಎಕರೆಯನ್ನು ದುರಸ್ತಿ ಮಾಡಲಾಗಿದೆ ಎಂದರೆ ಸರಿ. ಆ ರೀತಿ ಈ ಹಿಂದೆ ದಾವಾ ಸ್ವತ್ತು ಸರ್ವೆ ನಂಬರ್ 467 ರ 3 ಎಕರೆ ಜಮೀನಿನಲ್ಲಿ ದುರಸ್ತಿ ಮಾಡಿದ ಕಾಲಕ್ಕೆ ನಿಸಿ.2 ರಲ್ಲಿ ನಾನು ತೋರಿಸಿರುವಂತೆ ಯಾವುದೇ ರಸ್ತೆ ಮತ್ತು ಹಳ್ಳ ಇರುವುದಿಲ್ಲ ಎಂದರೆ ಸರಿ.

9) ಗೌಡಗೆರೆ ಗ್ರಾಮದ ಸರ್ವೆ ನಂ. 82 ರ ಜಮೀನಿನ ಫಲಾನುಭವಿಗಳಿಗೆ ನೋಟೀಸನ್ನು ನೀಡುವಂತೆ ನ್ಯಾಯಾಲಯದಿಂದ ನನಗೆ ಸೂಚನೆ ಇರಲಿಲ್ಲ ಆದರೆ ಆ ಬಗ್ಗೆ ವಕೀಲರ ಸೂಚನಾ ಮೆಮೊದಲ್ಲಿ ಇರುತ್ತದೆ. ಅದೇ ರೀತಿ ಎಂ.ಬಿ.ಹಳ್ಳಿ ಗ್ರಾಮದ ಸರ್ವೆ ನಂ. 383 ರ ಜಮೀನಿನ ಫಲಾನುಭವಿಗಳಿಗೆ ನೋಟೀಸನ್ನು ನೀಡುವಂತೆ ನ್ಯಾಯಾಲಯದಿಂದ ನನಗೆ ಸೂಚನೆ ಇರಲಿಲ್ಲ ಆದರೆ ಆ ಬಗ್ಗೆ ವಕೀಲರ ಸೂಚನಾ ಮೆಮೊದಲ್ಲಿ ಇರುತ್ತದೆ. ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸನ್ನು ನೀಡಿ ಸರ್ವೆ ನಂ.467 ಅನ್ನು ಅಳತೆ ಮಾಡವಂತೆ ವಾರೆಂಟ್ ನೀಡಲಾಗಿತ್ತು ಎಂದರೆ ಸರಿ. ಉದ್ದೇಶಪೂರ್ವಕವಾಗಿ ಸರ್ವೆ ನಂ.467 ಅನ್ನು ಒಳಗೊಂಡಂತೆ ನ್ಯಾಯಾಲಯದ ಆದೇಶ ಇದರೇ ಇದ್ದರೂ ಸಹ ಇನ್ನುಳಿದ ಸರ್ವೆ ನಂಬರ್ ಗಳನ್ನು ಅಳತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ನಿರ್ದೇಶದ ಮೇರೆಗೆ ನಾನು ಸರಿಯಾಗಿ ಅಳತೆ ಮಾಡಿ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.467 ರ ಜಮೀನಿನಲ್ಲಿ ವಾಸ್ತವವಾಗಿ ಏನು ಏನು ಇದೆ ಎಂಬುದನ್ನು ವರದಿ ಮಾಡುವಂತೆ ನನಗೆ ನ್ಯಾಯಾಲಯದಿಂದ ಆದೇಶ ಬಂದಿರಲಿಲ್ಲ ಎಂದರೆ ಸರಿ. ದಾವಾ ಸ್ವತ್ತು ಸರ್ವೆ ನಂ.467 ರಲ್ಲಿ ನ ಮೂರು ಎಕರೆ ಜಮೀನಿನಲ್ಲಿ ಒತ್ತುವರಿ ಮಾಡಿರುವ ಬಾಜುದಾರರು ಮತ್ತು ವಿಸ್ತೀರ್ಣದ ಕುರಿತು ಮಾತ್ರ ವರದಿ ನೀಡುವಂತೆ ನ್ಯಾಯಾಲಯದ ಆದೇಶ ಆಗಿತ್ತು ಎಂದರೆ ಸರಿ. ಪ್ರತಿವಾದಿಗಳ ಮಾತು ಕೇಳಿ ನ್ಯಾಯಾಲಯದ ಆದೇಶವನ್ನು ಹೊರತುಪಡಿಸಿ ಅಳತೆಯನ್ನು ಬೇರೆ ರೀತಿಯಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

**<u>ಪಾಟೀ ಸವಾಲು:- 1ನೇ ಪ್ರತಿವಾದಿ ಹಾಗೂ ಪ್ರತಿವಾದಿ 2(ಸಿ) ಪರ ಶ್ರೀ ಆರ್.ವಿ.ಕೆ. ಮತ್ತು ಶ್ರೀ ಎಂ.ಎಂ. ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.</u>**

**<u>ಪಾಟೀ ಸವಾಲು:- 3ನೇ ಪ್ರತಿವಾದಿ ಪರ ಶ್ರೀ ಎ.ಕೆ.ಎಂ. ವಕೀಲರು ಗೈರು ಹಾಜರಿದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**<u>ಪಾಟೀ ಸವಾಲು:- 5ನೇ ಪ್ರತಿವಾದಿ ಪರ ಶ್ರೀ ಪಿ.ಎಲ್.ಎನ್. ವಕೀಲರು ಗೈರು ಹಾಜರಿದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**